**ಕರ್ನಾಟಕ ಸರ್ಕಾರ**

**ಕರ್ನಾಟಕ ಪರೀಕ್ಷಾ ಪ್ರಾಧಿಕಾರ**

**ಸಂಖ್ಯೆ: ಇಡಿ/ಕೆಇಎ/ಯುಜಿಸಿಇಟಿ/2022** **ದಿನಾಂಕ: 25-11-2022**

**ಯುಜಿಸಿಇಟಿ-2022- ಎರಡನೇ ಮುಂದುವರಿದ ಸುತ್ತಿನ ಸೀಟು ಹಂಚಿಕೆ – ಇಂಜಿನಿಯರಿಂಗ್ / ಆರ್ಕಿಟೆಕ್ಚರ್ / ಕೃಷಿ ವಿಜ್ಞಾನ / ಫಾರ್ಮಸಿ / ನ್ಯಾಚುರೋಪತಿ ಮತ್ತು ಯೋಗ ಮುಂತಾದ ಕೋರ್ಸುಗಳು**

**(ಇಂಜಿನಿಯರಿಂಗ್ / ಆರ್ಕಿಟೆಕ್ಚರ್ ಕೋರ್ಸಿಗಳಿಗೆ ಸಿಇಟಿ-2022ಕ್ಕೆ ಹಾಜರಾಗಿ 2022ನೇ ಸಾಲಿನ ಪೂರಕ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳೂ ಸೇರಿದಂತೆ)**

**ಯುಜಿಸಿಇಟಿ-2022ರಲ್ಲಿ ರ್‍ಯಾಂಕ್ ಪಡೆದು ಇಲ್ಲಿಯವರೆಗೆ ದಾಖಲೆಗಳ ಪರಿಶೀಲನೆಗೆ ಹಾಜರಾಗದಿರುವ ಅರ್ಹ ಅಭ್ಯರ್ಥಿಗಳು (Verification Slip ಅನ್ನು ಪಡೆಯದಿರುವವರು) ಎರಡನೇ ಮುಂದುವರೆದ ಸುತ್ತಿನ ಸೀಟು ಹಂಚಿಕೆಯಲ್ಲಿ ಲಭ್ಯವಾಗುವ ಸೀಟುಗಳನ್ನು ಪಡೆಯಲು ಅರ್ಹತೆ ಹೊಂದುವುದಕ್ಕಾಗಿ ದಿನಾಂಕ 26-11-2022 ರಂದು ಬೆಳಿಗ್ಗೆ 11.00 ಗಂಟೆಗೆ ಕೆಇಎ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಎಲ್ಲಾ ಮೂಲ ದಾಖಲೆಗಳು ಹಾಗು ಒಂದು ಸೆಟ್ ಜೆರಾಕ್ಸ ಪ್ರತಿಗಳೊಂದಿಗೆ ಹಾಜರಾಗಬಹುದು. ಸಲ್ಲಿಸಬೇಕಾದ ಮೂಲ ದಾಖಲೆಗಳ ಬಗ್ಗೆ ಯುಜಿಸಿಇಟಿ-2022 ರ ಮಾಹಿತಿ ಪುಸ್ತಕವನ್ನು ನೋಡಬಹುದು.**

ಇಂಜಿನಿಯರಿಂಗ್ / ಆರ್ಕಿಟೆಕ್ಚರ್ / ಕೃಷಿ ವಿಜ್ಞಾನ / ವೆಟರಿನರಿ / ಯೋಗ-ನ್ಯಾಚುರೋಪತಿ ಮುಂತಾದ ಕೋರ್ಸುಗಳಿಗೆ ಎರಡನೇ ಮುಂದುವರಿದ ಸುತ್ತಿನ ಸೀಟು ಹಂಚಿಕೆಯನ್ನು ಈ ಕೆಳಕಂಡ ವೇಳಾಪಟ್ಟಿಯಂತೆ ನಡೆಸಲಾಗುವುದು.

**2022ನೇ ಸಾಲಿನಲ್ಲಿ ಪೂರಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳಿಗೆ**

ಸರ್ಕಾರದ ನಿರ್ದೇಶನದಂತೆ 2022ನೇ ಸಾಲಿನ 2ನೇ ಪಿಯುಸಿ / 12ನೇ ತರಗತಿ ಪೂರಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಅರ್ಹತೆಯನ್ನು ಪಡೆದು ಸಿಇಟಿ-2022ಕ್ಕೆ ಹಾಜರಾಗಿರುವ ಅಭ್ಯರ್ಥಿಗಳಿಗೆ ರ್‍ಯಾಂಕ್ ಅನ್ನು ನೀಡಿ, ಎರಡನೇ ಮುಂದುವರಿದ ಸುತ್ತಿನ ಸೀಟು ಹಂಚಿಕೆಯ ನಂತರ ಉಳಿಯುವ ಇಂಜಿನಿಯರಿಂಗ್ / ಆರ್ಕಿಟೆಕ್ಚರ್ ಸೀಟುಗಳನ್ನು ಪೂರಕ ಪರೀಕ್ಷೆಯ ಅರ್ಹ ಅಭ್ಯರ್ಥಿಗಳಿಗೆ ಹಂಚಿಕೆ ಮಾಡಲಾಗುವುದು. (ಪೂರಕ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳಿಗೆ ದಾಖಲೆಗಳ ಪರಿಶೀಲನೆಗೆ ಹಾಜರಾಗುವ ಅವಶ್ಯಕತೆ ಇರುವುದಿಲ್ಲ.)

**ಪೂರಕ ಪರೀಕ್ಷೆ ಅಭ್ಯರ್ಥಿಗಳ ಫಲಿತಾಂಶ ಪ್ರಕಟಣೆ – ದಿನಾಂಕ 25-11-2022 ಸಂಜೆ 5.00 ರ ನಂತರ**

2022ನೇ ಸಾಲಿನ 2ನೇ ಪಿಯುಸಿ ಪೂರಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಅಭ್ಯರ್ಥಿಗಳ ಅಂಕಗಳನ್ನು ನೇರವಾಗಿ ಇಲಾಖೆಯಿಂದ ಪಡೆಯಲಾಗುವುದು. ಇತರೆ ಬೋರ್ಡ್‌ಗಳಿಂದ (CBSE, CISCE, 10+2) 2022ನೇ ಸಾಲಿನಲ್ಲಿ 12ನೇ ತರಗತಿಯನ್ನು ಪೂರಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಅಭ್ಯರ್ಥಿಗಳು ತಮ್ಮ ಅಂಕಪಟ್ಟಿಗಳನ್ನು ಸಿಇಟಿ-2022ನೇ ಸಾಲಿನ ಪ್ರವೇಶ ಪತ್ರದೊಂದಿಗೆ ಪ್ರಾಧಿಕಾರಕ್ಕೆ ದಿನಾಂಕ 26-11-2022 ಮ.1.00 ಗಂಟೆಯೊಳಗಾಗಿ ಸಲ್ಲಿಸಬಹುದಾಗಿದೆ.

ಫಲಿತಾಂಶ ಪ್ರಕಟಣೆಯ ನಂತರ ಅರ್ಹ ಅಭ್ಯರ್ಥಿಗಳು Verification Slip ಅನ್ನು ಡೌನ್‌ಲೋಡ್ ಮಾಡಿಕೊಂಡು ಇಚ್ಛೆ / ಆಯ್ಕೆಗಳನ್ನು ದಾಖಲಿಸಬಹುದು. ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ನಿಗದಿತ ಲಿಂಕ್ ಅನ್ನು ಆಯ್ಕೆ ಮಾಡಿ ಅಭ್ಯರ್ಥಿಗಳ ವಿವರಗಳನ್ನು ದಾಖಲಿಸಿ, ಇಚ್ಛೆ / ಆಯ್ಕೆಗಳನ್ನು ದಾಖಲಿಸುವ ಸಮಯದಲ್ಲಿ ಆದ್ಯತಾ ಕ್ರಮಗಳನ್ನು ಅನುಸರಿಸಲು ಸೂಚಿಸಿದೆ. ವಿವರವಾದ ಮಾಹಿತಿಗಾಗಿ ಅಭ್ಯರ್ಥಿಗಳು ಯುಜಿಸಿಇಟಿ-2022 ರ ಮಾಹಿತಿ ಪುಸ್ತಕದಲ್ಲಿ ನೀಡಿರುವ ಸೂಚನೆಗಳನ್ನು ಓದಿಕೊಳ್ಳಬಹುದಾಗಿದೆ.

ಎರಡನೇ ಮುಂದುವರಿದ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆಯ ನಂತರ ಅಭ್ಯರ್ಥಿಗಳಿಗೆ ಯಾವುದೇ ಛಾಯ್ಸ್ ಗಳು ಆಯ್ಕೆ ಮಾಡಲು ಅವಕಾಶ ಇರುವುದಿಲ್ಲ, ಅಭ್ಯರ್ಥಿಗಳು ಕಡ್ಡಾಯವಾಗಿ ಹಂಚಿಕೆಯಾದ ಸೀಟಿಗೆ ಪ್ರವೇಶವನ್ನು ಪಡೆಯಬೇಕು, ಆದ್ದರಿಂದ ಅಭ್ಯರ್ಥಿಗಳು ಮತ್ತು ಪೋಷಕರು ತಮಗೆ ಇಷ್ಟವಿರುವ ಕಾಲೇಜುಗಳನ್ನು ಮಾತ್ರ ದಾಖಲಿಸಬೇಕು, ಏಕೆಂದರೆ ಮೆರಿಟ್ ಆಧಾರದ ಮೇಲೆ ಹಾಗು ಅಭ್ಯರ್ಥಿಗಳು ದಾಖಲಿಸುವ options ಗಳನ್ನು ಪರಿಗಣಿಸಿ ಸೀಟು ಹಂಚಿಕೆ ಮಾಡುವುದರಿಂದ ಯಾವುದೇ ಕಾರಣಗಳನ್ನು ನೀಡದೆ ಹಂಚಿಕೆಯಾದ ಕಾಲೇಜಿನಲ್ಲಿ ಪ್ರವೇಶವನ್ನು ಕಡ್ಡಾಯವಾಗಿ ಪಡೆಯಬೇಕು. ಹಂಚಿಕೆಯಾದ ಸೀಟನ್ನು ನಿರಾಕರಿಸುವಂತಿಲ್ಲ. ಆದ್ದರಿಂದ ಅಭ್ಯರ್ಥಿಗಳು ಎಚ್ಚರದಿಂದ options ಗಳನ್ನು ಆದ್ಯತೆಯ ಕ್ರಮಾಂಕದಲ್ಲಿ ಸಲ್ಲಿಸಬೇಕು.

ಕಾರ್ಯನಿರ್ವಾಹಕ ನಿರ್ದೇಶಕರು

ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಖ್ಯೆ: ಇಡಿ/ಕೆಇಎ/ಯುಜಿಸಿಇಟಿ/2022 ದಿನಾಂಕ: 25-11-2022

## Second Extended Round Schedule - ಎರಡನೇ ಮುಂದುವರಿದ ಸುತ್ತಿನ ವೇಳಾಪಟ್ಟಿ

| Sl. No. | Particulars | Date and Time |
|---|---|---|
| 01 | Display of seat matrix ಸೀಟ್ ಮ್ಯಾಟ್ರಿಕ್ಸ್ ಮತ್ತು ಶುಲ್ಕದ ವಿವರಗಳ ಪ್ರಕಟಣೆ | 26-11-2022 after 3.00 PM |
| 02 | Option Entry by Eligible Candidates<br>(candidates can add fresh options / modify the options / delete the options) (ಅಭ್ಯರ್ಥಿಗಳು ಇಚ್ಛೆ / ಆಯ್ಕೆಗಳನ್ನು ಅವಶ್ಯವಿದ್ದಲ್ಲಿ ಬದಲಾಯಿಸ ಬಹುದಾಗಿದೆ / ಸೇರಿಸಬಹುದಾಗಿದೆ / ಅಳಿಸಬಹುದಾಗಿದೆ.) | From 5.00 pm on 26-11-2022 to 28-11-2022 upto 11.00 am |
| | Candidates are advised to modify / re-order / enter the options they want to select whether the seats shown in the seat matrix or not, only for the reason that consequential vacancies may arise during allotment process and the candidates will have a chance of getting a better seat if they have entered the options.<br>ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ಸೀಟುಗಳ ಲಭ್ಯತೆಯನ್ನು ತೋರಿಸದಿದ್ದರೂ ಸಹ ಅಭ್ಯರ್ಥಿಗಳು ಆದ್ಯತೆಗಳನ್ನು ಬದಲಾಯಿಸಲು / ಮಾರ್ಪಡಿಸಲು / ಸೇರಿಸಲು ಸಲಹೆ ನೀಡಲಾಗಿದೆ. ಯಾಕೆಂದರೆ ಸೀಟು ಹಂಚಿಕೆಯ ಕಾರ್ಯದಲ್ಲಿ ಉದ್ಭವಿಸುವ ಸೀಟುಗಳನ್ನೂ ಸಹ ಹಂಚಿಕೆ ಮಾಡುವುದರಿಂದ ಅಭ್ಯರ್ಥಿಗಳು ಆಯ್ಕೆಗಳನ್ನು ನಮೂದಿಸಿದ್ದಲ್ಲಿ ಅಂತಹ ಸೀಟುಗಳನ್ನು ಪಡೆಯಬಹುದಾಗಿದೆ. | |
| 03 | Candidates who wish to surrender the KEA seat selected in First round or in the Second round, can cancel the seat on or before - 11.00 am on 28-11-2022 (eligible for refund of fee amount after deducting Rs.5,000/-)<br>ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಅಥವಾ ಎರಡನೇ ಸುತ್ತಿನಲ್ಲಿ ತಮಗೆ ದೊರೆತಿರುವ ಸೀಟು ರದ್ದುಪಡಿಸಿಕೊಳ್ಳಬೇಕಾದಲ್ಲಿ 28-11-2022 ಬೆ. 11.00 ರೊಳಗಾಗಿ ರದ್ದುಪಡಿಸಿಕೊಳ್ಳಬಹುದು, ಅಂತಹ ಅಭ್ಯರ್ಥಿಗಳಿಗೆ ರೂ.5,000/-ಕಟಾವು ಮಾಡಿಕೊಂಡು ಉಳಿದ ಮೊತ್ತವನ್ನು ಹಿಂದಿರುಗಿಸಲಾಗುವುದು. | |
| 04 | Publication of Second Extended Round Seat Allotment Results<br>ಎರಡನೇ ಮುಂದುವರಿದ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ | 29-11-2022 after 11.00 am |
| 05 | Payment of Fees and downloading of admission order (Fee paid if any in the earlier round, will be adjusted in this round upon selection of a seat in this round)<br>ಅಭ್ಯರ್ಥಿಗಳು ಶುಲ್ಕ ಪಾವತಿ ಮಾಡುವುದು ಮತ್ತು ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವುದು (ಹಿಂದಿನ ಸುತ್ತಿನಲ್ಲಿ ಶುಲ್ಕವನ್ನು ಪಾವತಿಸಿದ್ದರೆ ಈ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಹೊಂದಾಣಿಕೆ ಮಾಡಲಾಗುವುದು.) | 29-11-2022 to 30-11-2022 |
| 06 | Last date for reporting to colleges<br>ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಕೊನೆಯ ದಿನಾಂಕ | 30-11-2022 upto 5.30 pm |

ಕಾರ್ಯನಿರ್ವಾಹಕ ನಿರ್ದೇಶಕರು.

Government of Karnataka
Karnataka Examinations Authority

No. ED/KEA/UGCET/2022 Date: 25-11-2022

**UGCET-2022 – SECOND EXTENDED ROUND SEAT ALLOTMENT TO ENGINEERING, ARCHITECTURE, B-PHARMA, FARM SCIENCE YOGA & NATUROPTHY AND OTHER COURSES**

(Including those candidates who have qualified in supplementary examination 2022 and appeared for CET-2022 – for Engineering and Architecture courses)

The candidates who have been assigned ranks in UGCET-2022, but could not participate in the document verification process (not holding the verification slip) can appear for document verification with all the necessary original documents with one set of photocopies at KEA, Malleshwaram, Bangalore to become eligible to participate in Second Extended Round for the available seats. Please read the UGCET-2022 Information Bulletin for submission of original documents.

UGCET-2022 SECOND EXTENDED ROUND seat allotment for admission to Engineering, Architecture, Agriculture, Veterinary, Pharmacy, Naturopathy & Yoga etc courses for the year 2022 will be conducted as per the following schedule.

**Candidates who have qualified in 2022 Supplementary Examination**

As per the directions of the Government, Engineering and Architecture seats which may remain unfilled after SECOND EXTENDED ROUND of seat allotment will be allotted to the eligible supplementary candidates who have qualified in 2$^{nd}$ PUC / 12$^{th}$ Std. Supplementary Examination during 2022.

**Publication of Supplementary Results: 25-11-2022 after 5.00 pm**

Qualifying exam marks of candidates who have qualified in 2$^{nd}$ PUC Supplementary 2022 examination will be obtained directly from PUE Board, the other candidates i.e., CBSE, CISCE, 10+2 students who have qualified 12$^{th}$ Standard in 2022 supplementary examination should submit the marks cards along with copy of the CET-2022 admission ticket before 1.00 pm on 26-12-2022 to get the eligibility to participate in this round.

Eligible supplementary qualified candidates have to download the verification slip from KEA Website and then enter their priority of options. Candidates are advised to enter the options in the order of priority. For more details candidates can refer the UGCET-2022 Information Bulletin.

After publication of second extended round seat allotment result it is mandatory to the candidates to take admission to the allotted college as there will not be any choices to opt. Hence the candidates and parents are advised to enter only such options, in case if the seat is allotted to them based on merit, the candidate should report to the college for admission without giving any reason. Options needs to be entered in the order of the priority, as the allotment of seats are based on merit and priority of entered by the candidate.

Executive Director.

## A NOTE ON SEAT CANCELLATION, REFUND AND FORFEITURE OF FEE

As per Rule 12 of Karnataka Selection of Candidates for Admission to Government Seats in Professional Educational Institutions Rules, 2006,

(1) If a candidate who has been allotted a seat in any discipline in the First Round or in the Second Round and who has reported to the college, wishes to surrenders / cancel the seat before the last date notified for entry of options for the Second Extended Round / Casual Vacancy Round, the Executive Director, shall deduct Rs.5,000/- as processing fee and refund the remaining fee paid.

(2) If a candidate who has been allotted a seat in any discipline (except Engineering) in the First Round or in the Second Round and who has reported to the college or not, surrenders the seat after the completion of Second Extended Round / Casual Vacancy Round the Executive Director, shall forfeit the entire fee paid.

(3) The candidate who surrenders the seat (except Engineering) allotted in the Second Extended Round / Casual Vacancy Round, the Executive Director shall forfeit the entire fee paid.

(4) If a Candidate who has been allotted a seat in any discipline in an Engineering College or Institution under sub-rule (4) of rule 10 surrenders the seat after completion of respective Casual Vacancy Round, the Executive Director shall forfeit the entire fee paid and the candidate shall be liable to pay a penalty of five times of the fee.

(5) if a candidate does not surrender the allotted a seat in any discipline in an Engineering College or Institution under sub-rule (4) of rule 10 or fail to join the allotted college even after the completion of the Casual Vacancy Round, the Executive Director, Karnataka Examinations Authority shall forfeit the entire fee amount paid by the candidates and the candidate shall be liable to pay a penalty of five times of the fee.

(6) If a candidate reports to the college and later on leaves the college he / she have to necessarily surrender the seat back to KEA only. It is the endeavor of KEA to see that subsidized Government Quota seats are accessible and available to all meritorious students. Hence failing to surrender the seat back to KEA will be viewed as a breach of contract and severe lack of social responsibility.

(7) No surrender or cancellation of seat shall be accepted, unless the candidate surrenders the original admission order issued by the KEA, original Bank Challan and original Verification Slip.

(8) If a candidate does not surrender / cancel / fails to join the allotted college (except engineering) even after the completion of the Second Extended Round / Casual Vacancy Round the Executive Director, Karnataka Examinations Authority shall forfeit the entire fee amount paid by the candidates.

## ಸೀಟನ್ನು ರದ್ದುಗೊಳಿಸುವುದು, ಶುಲ್ಕ ಮರುಸಂದಾಯ ಮತ್ತು ಶುಲ್ಕ ಮುಟ್ಟುಗೋಲು ಹಾಕಿಕೊಳ್ಳುವುದರ ವಿವರಗಳು

(1) ಒಬ್ಬ ವಿದ್ಯಾರ್ಥಿ/ನಿಗೆ, ಮೊದಲ/ಎರಡನೇ ಸುತ್ತಿನಲ್ಲಿ ಯಾವುದೇ ಡಿಸಿಪ್ಲಿನಿನಲ್ಲಿ ಸೀಟು ಹಂಚಿಕೆಯಾಗಿದ್ದು ಮತ್ತು ಆತ/ ಆಕೆ, ತನಗೆ ಹಂಚಿಕೆಯಾಗಿರುವ ಕಾಲೇಜಿಗೆ ಸೇರಿಕೊಂಡಿದ್ದು, ಆನಂತರ, ಎರಡನೇ ಮುಂದುವರಿದ ಸುತ್ತಿಗೆ / ಕ್ಯಾಶುಯಲ್ ತೆರವು ಹಂತದ ಸುತ್ತಿಗೆ ಇಚ್ಛೆಗಳನ್ನು ನಮೂದಿಸುವುದಕ್ಕಾಗಿ ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕಿಂತ ಮೊದಲು ತಮ್ಮ ಆ ಸೀಟನ್ನು ಬಿಟ್ಟುಕೊಡಲು/ ರದ್ದುಪಡಿಸಲು ಇಚ್ಛಿಸಿದ ಪಕ್ಷದಲ್ಲಿ, ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಇವರು ಅಂತಹ ವಿದ್ಯಾರ್ಥಿ/ನಿ ಸಂದಾಯ ಮಾಡಿರುವ ಶುಲ್ಕದಿಂದ ಪ್ರಕ್ರಿಯಾ ಶುಲ್ಕವಾಗಿ ರೂ. 5,000/- ಮೊತ್ತವನ್ನು ಕಡಿತಗೊಳಿಸಿಕೊಳ್ಳುತ್ತಾರೆ ಮತ್ತು ಉಳಿದ ಮೊತ್ತವನ್ನು ವಿದ್ಯಾರ್ಥಿ/ನಿಗೆ ಮರುಸಂದಾಯ ಮಾಡುತ್ತಾರೆ.

(2) ಮೊದಲನೇ ಸುತ್ತಿನಲ್ಲಿ/ ಎರಡನೇ ಸುತ್ತಿನಲ್ಲಿ ಯಾವುದೇ ಡಿಸಿಪ್ಲಿನಿನಲ್ಲಿ (ಇಂಜಿನಿಯರಿಂಗ್ ಹೊರತು ಪಡಿಸಿ), ಒಬ್ಬ ವಿದ್ಯಾರ್ಥಿ/ನಿಗೆ ಸೀಟು ಹಂಚಿಕೆಯಾಗಿದ್ದು ಮತ್ತು ಆತ/ ಆಕೆ ತನಗೆ ಹಂಚಿಕೆಯಾಗಿರುವ ಕಾಲೇಜಿಗೆ ಸೇರಿಕೊಂಡಿರಲೀ ಅಥವಾ ಇಲ್ಲದಿರಲೀ ತನಗೆ ಹಾಗೆ ಹಂಚಿಕೆಯಾಗಿರುವ ಸೀಟನ್ನು ಎರಡನೇ ಮುಂದುವರಿದ ಸುತ್ತು / ಕ್ಯಾಶುಯಲ್ ತೆರವು ಹಂತದ ಸುತ್ತು ಮುಗಿದ ನಂತರ ಬಿಟ್ಟುಕೊಡಲು ಇಚ್ಛಿಸಿದ ಪಕ್ಷದಲ್ಲಿ, ಕಾರ್ಯನಿರ್ವಾಹಕ ನಿರ್ದೇಶಕರು, ಅಂಥ ವಿದ್ಯಾರ್ಥಿ/ನಿ ಸಂದಾಯ ಮಾಡಿರುವ ಪೂರ್ತಿ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಾರೆ.

(3) ಎರಡನೇ ಮುಂದುವರಿದ ಸುತ್ತಿನಲ್ಲಿ / ಕ್ಯಾಶುಯಲ್ ತೆರವು ಹಂತದ ಸುತ್ತಿನಲ್ಲಿ ಹಂಚಿಕೆಯಾಗಿರುವ (ಇಂಜಿನಿಯರಿಂಗ್ ಹೊರತು ಪಡಿಸಿ), ಸೀಟನ್ನು ಬಿಟ್ಟುಕೊಡುವ ವಿದ್ಯಾರ್ಥಿ/ನಿ ಸಂದಾಯ ಮಾಡಿರುವ ಪೂರ್ತಿ ಶುಲ್ಕವನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಇವರು ಮುಟ್ಟುಗೋಲು ಹಾಕಿಕೊಳ್ಳುತ್ತಾರೆ.

(4) ನಿಯಮ 10 (4) ರ ಅಡಿಯಲ್ಲಿ ಇಂಜಿನಿಯರಿಂಗ್ ಕಾಲೇಜು ಅಥವಾ ಸಂಸ್ಥೆಯ ಯಾವುದೇ ಕೋರ್ಸಿಗೆ ಸೀಟು ಹಂಚಿಕೆಯಾದ ಅಭ್ಯರ್ಥಿಯು ಆಯಾ ಕ್ಯಾಷುಯಲ್ ತೆರವು ಹಂತದ ಸುತ್ತು ಮುಗಿದ ನಂತರ ಸೀಟನ್ನು ರದ್ದುಪಡಿಸಿಕೊಂಡಲ್ಲಿ, ವಿದ್ಯಾರ್ಥಿ/ನಿ ಸಂದಾಯ ಮಾಡಿರುವ ಪೂರ್ತಿ ಶುಲ್ಕವನ್ನು ಮುಟ್ಟುಗೋಲು ಹಾಕಿ ಕೊಳ್ಳಲಾಗುವುದು ಮತ್ತು ಶುಲ್ಕದ ಐದು ಪಟ್ಟು ದಂಡವನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಇವರಿಗೆ ಸಂದಾಯ ಮಾಡಬೇಕಾಗುತ್ತದೆ.

(5) ನಿಯಮ 10 (4) ರ ಅಡಿಯಲ್ಲಿ ಇಂಜಿನಿಯರಿಂಗ್ ಕಾಲೇಜು ಅಥವಾ ಸಂಸ್ಥೆಯ ಯಾವುದೇ ಕೋರ್ಸಿಗೆ ಸೀಟು ಹಂಚಿಕೆಯಾದ ಅಭ್ಯರ್ಥಿಯು ಆಯಾ ಕ್ಯಾಷುಯಲ್ ತೆರವು ಹಂತದ ಸುತ್ತು ಮುಗಿದ ನಂತರವೂ ಹಂಚಿಕೆಯಾದ ಕಾಲೇಜಿಗೆ ಪ್ರವೇಶ ಪಡೆಯದಿದ್ದಲ್ಲಿ ವಿದ್ಯಾರ್ಥಿ/ನಿ ಸಂದಾಯ ಮಾಡಿರುವ ಪೂರ್ತಿ ಶುಲ್ಕವನ್ನು ಮುಟ್ಟುಗೋಲು ಹಾಕಿ ಕೊಳ್ಳಲಾಗುವುದು ಮತ್ತು ಶುಲ್ಕದ ಐದು ಪಟ್ಟು ದಂಡವನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಇವರಿಗೆ ಸಂದಾಯ ಮಾಡಬೇಕಾಗುತ್ತದೆ.

(6) ವಿದ್ಯಾರ್ಥಿ/ನಿಯು, ಕ.ಪ.ಪ್ರಾ. ಪಡೆದಿರುವ ಮೂಲ ಪ್ರವೇಶಾತಿ ಆದೇಶ ಪತ್ರ, ಮೂಲ ಬ್ಯಾಂಕ್ ಚಲನ್, ಮತ್ತು ಮೂಲ ಪರಿಶೀಲನಾ ಚೀಟಿಯನ್ನು ಒಪ್ಪಿಸದಿದ್ದರೆ, ಆತ/ ಆಕೆ ಸೀಟನ್ನು ಬಿಟ್ಟುಕೊಡುವುದನ್ನು ಅಥವಾ ರದ್ದುಪಡಿಸಿಕೊಳ್ಳುವುದನ್ನು ಒಪ್ಪಿಕೊಳ್ಳುವುದಿಲ್ಲ.

(7) ಎರಡನೇ ಮುಂದುವರಿದ ಸುತ್ತು ಮುಗಿದ ನಂತರವೂ ಒಬ್ಬ ವಿದ್ಯಾರ್ಥಿ/ನಿ ತನಗೆ ಹಂಚಿಕೆಯಾಗಿರುವ ಸೀಟನ್ನು ಬಿಟ್ಟುಕೊಡದಿದ್ದರೆ, ರದ್ದುಪಡಿಸಿಕೊಳ್ಳದಿದ್ದರೆ/ ತನಗೆ ಹಂಚಿಕೆಯಾಗಿರುವ ಕಾಲೇಜಿಗೆ ಸೇರಿಕೊಳ್ಳದಿದ್ದರೆ ಅಂತಹ ವಿದ್ಯಾರ್ಥಿ/ನಿ ಸಂದಾಯ ಮಾಡಿರುವ ಪೂರ್ತಿ ಮೊತ್ತವನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಇವರು ಮುಟ್ಟುಗೋಲು ಹಾಕಿಕೊಳ್ಳುತ್ತಾರೆ.

(8) ವಿದ್ಯಾರ್ಥಿ/ನಿಯು, ತನಗೆ ಹಂಚಿಕೆಯಾಗಿರುವ ಕಾಲೇಜಿಗೆ ಸೇರಿಕೊಂಡಿದ್ದು, ಆನಂತರ ಆ ಕಾಲೇಜನ್ನು ಬಿಟ್ಟುಬಿಟ್ಟರೆ, ಆತ/ಆಕೆ ಅಂಥ ಸೀಟನ್ನು ತಪ್ಪದೆ ಕ.ಪ.ಪ್ರಾ.ಕ್ಕೆ ಮಾತ್ರ ಬಿಟ್ಟುಕೊಡಬೇಕು. ಸಹಾಯಧನ ಒದಗಿಸಿರುವ ಸರ್ಕಾರಿ ಕೋಟಾದ ಸೀಟುಗಳು, ಎಲ್ಲಾ ಮೆರಿಟ್ ವಿದ್ಯಾರ್ಥಿಗಳಿಗೆ ಸಿಗುವಂತೆ ಮತ್ತು ದೊರೆಯುವಂತೆ ನೋಡಿಕೊಳ್ಳುವುದು ಕ.ಪ.ಪ್ರಾ.ದ ಪ್ರಯತ್ನವಾಗಿದೆ. ಆದ್ದರಿಂದ, ಕ.ಪ.ಪ್ರಾ.ಕ್ಕೆ ಸೀಟನ್ನು ಬಿಟ್ಟುಕೊಡುವುದರಲ್ಲಿ ವಿಫಲವಾಗುವುದನ್ನು, ಕರಾರಿನ ಉಲ್ಲಂಘನೆ ಮತ್ತು ಸಾಮಾಜಿಕ ಹೊಣೆಗಾರಿಕೆಯ ನಿರ್ವಹಣೆಯಲ್ಲಿ ಎಸಗಿದ ಗುರುತರವಾದ ಲೋಪ ಎಂದು ಪರಿಗಣಿಸಲಾಗುವುದು.